# ಸುದ್ದಿಯಲ್ಲಿ ಅಮಿತಾಭ್

ಅಮಿತಾಭ್ ಬಚ್ಚನ್ ಅಭಿನಯದ 'ಬ್ರಹ್ಮಾಸ್ತ್ರ' ಡಿಸೆಂಬರ್ 25ರಂದು ತೆರೆಗೆ ಬರುವುದು ಖಚಿತವಾಗಿದೆ. ಈ ಚಿತ್ರದ ಮುಖ್ಯ ತಾರಾಗಣದಲ್ಲಿ ರಣಬೀರ್ ಕಪೂರ್ ಮತ್ತು ಆಲಿಯಾ ಭಟ್ ನಟಿಸಿದ್ದಾರೆ. ಅಮಿತಾಭ್‌ರದ್ದು ಪೋಷಕ ಪಾತ್ರ. ಹಾಗೆಂದು ಅಮಿತಾಭ್ ಅಭಿಮಾನಿಗಳಿಗೇನೂ ಬೇಜಾರಿಲ್ಲ. 'ಬೇರೆ ಯಾರೇ ಹೀರೊ ಆಗಿರಲಿ ಅಮಿತಾಭ್ ಆ ಚಿತ್ರದಲ್ಲಿ ಇದ್ದರೆ ಜನ ಅವರನ್ನೇ ನೋಡುವುದು' ಎನ್ನುವುದು ಅಭಿಮಾನಿಗಳ ಅಂಬೋಣ. ಎಳೆಯರ ಜೊತೆಗೆ ನಟಿಸುವುದರಲ್ಲಿ ಥ್ರಿಲ್ ಇದೆ ಎನ್ನುವುದು ಸ್ವತಃ ಅಮಿತಾಭ್ ಹೇಳಿದ ಮಾತು. ಈ ಚಿತ್ರದ ಬೆನ್ನಲ್ಲೇ ಅಮಿತಾಭ್, 'ಗುಲಾಬೊ ಸಿತಾಬೊ' ಎನ್ನುವ ಚಿತ್ರದಲ್ಲೂ ನಟಿಸುತ್ತಿದ್ದು ಅದರಲ್ಲಿ ಆಯುಷ್ಮಾನ್ ಖುರಾನಾ ನಾಯಕ.

ಇತ್ತೀಚೆಗೆ ಲಿವರ್ ಸಮಸ್ಯೆಯಿಂದ ಆಸ್ಪತ್ರೆ ಸೇರಿದ್ದ ಲಂಬೂಜಿ ಐದು ಕೆಜಿ ತೂಕ ಕಡಿಮೆ ಮಾಡಿಕೊಂಡಿದ್ದಾರಂತೆ. 'ಈಗ ದೇಹ ಇನ್ನಷ್ಟು ಚುರುಕಾಗಿದೆ' ಎಂದು ಖುಷಿಯಿಂದ ಟ್ವೀಟ್ ಮಾಡಿದ್ದಾರೆ. ಆಸ್ಪತ್ರೆಯಿಂದ ಮರಳಿದ ಮರುದಿನವೇ 'ಕೌನ್ ಬನೇಗಾ ಕರೋಡ್‌ಪತಿ' ಶೂಟಿಂಗಿಗೆ ಟೀವಿ ಸ್ಟುಡಿಯೊಗೆ ಹಾಜರಾಗಿದ್ದಾರೆ. ಆದರೆ ಎಂದಿನಂತೆ ಆ ಭಾನುವಾರ ಮನೆಯ ಮುಂದೆ ಸೇರಿದ್ದ ನೂರಾರು ಅಭಿಮಾನಿಗಳಿಗೆ ಅಮಿತಾಭ್ ದರ್ಶನ ಆಗಿಲ್ಲ. ಅದರ ಬೆನ್ನಲ್ಲೇ ಅಮಿತಾಭ್‌ಗೆ ತೀವ್ರ ಹುಷಾರಿಲ್ಲ, ಮೂರು ದಿನಗಳಿಂದ ಆಸ್ಪತ್ರೆಯಲ್ಲಿದ್ದಾರೆ ಎಂಬ ಸುದ್ದಿ ಹಬ್ಬಿತ್ತು. 'ಮಾಮೂಲಿ ಚೆಕಪ್‌ಗೆ ಆಸ್ಪತ್ರೆಗೆ ಹೋಗಿದ್ದು ನಿಜ' ಎನ್ನುವುದು ಕುಟುಂಬದವರ ವಿವರಣೆ. ಅದೇನೇ ಇರಲಿ, ವಯಸ್ಸು ಮತ್ತು ಅನಾರೋಗ್ಯ ಅಮಿತಾಭ್ ಚಟುವಟಿಕೆಗಳಿಗೆ ತಡೆ ಒಡ್ಡಿದಂತಿಲ್ಲ. ಈಗಲೂ ಕೆಬಿಸಿಯಲ್ಲಿ ಅಮಿತಾಭ್ ಕಂಡರೆ ಮಾತ್ರ ಟಿಆರ್‌ಪಿ ಏರುವುದು. ■





# ದಕ್ಷಿಣದತ್ತ ಶಾರೂಕ್ ಚಿತ್ತ

ಹತ್ತು ತಿಂಗಳ ಮೌನದ ನಂತರ ಶಾರೂಕ್ ಖಾನ್ ಸದ್ದು ಮತ್ತೆ ಕೇಳಿಸುತ್ತಿದೆ. ಶಾರೂಕ್ ಖಾನ್ ಅಭಿನಯದ ಹೊಸ ಸಿನಿಮಾ ಶೀಘ್ರವೇ ಶೂಟಿಂಗ್ ಆರಂಭಿಸಲಿದೆ. ಹಿಂದಿನ ಚಿತ್ರ ಬಹು ನಿರೀಕ್ಷೆಯ 'ಝೀರೊ' ಫ್ಲಾಪ್ ಆದ ಹಿನ್ನೆಲೆಯಲ್ಲಿ ಚಿಂತೆಯಲ್ಲಿದ್ದ ಶಾರೂಕ್, ಹೊಸ ಚಿತ್ರದ ಯಶಸ್ಸಿಗೆ ದಕ್ಷಿಣದ ಕಡೆಗೆ ನೋಡಿದ್ದಾನೆ. ಆತನ ಹೊಸ ಚಿತ್ರಕ್ಕೆ ತಮಿಳಿನ ಯಶಸ್ವೀ ನಿರ್ದೇಶಕ ಅಟ್ಲೀ ಕುಮಾರ್ ಆಕ್ಷನ್, ಕಟ್ ಹೇಳಲಿದ್ದಾನೆ.

ಅಟ್ಲೀ ಸದ್ಯ ತಮಿಳಿನಲ್ಲಿ ಭಾರೀ ಸುದ್ದಿ ಮಾಡುತ್ತಿರುವ ತರುಣ ನಿರ್ದೇಶಕ. ಆತ ಹಿಂದೆ ದಳಪತಿ ವಿಜಯ್‌ಗಾಗಿ ನಿರ್ದೇಶಿಸಿದ್ದ ಮರ್ಸಲ್ ಮತ್ತು ತೇಯರ್ ಎರಡೂ ಬಾಕ್ಸಾಫೀಸ್‌ನಲ್ಲಿ ಯಶಸ್ವೀ ಚಿತ್ರಗಳೆನ್ನಿಸಿದ್ದವು. ಇದೀಗ ಬಿಡುಗಡೆಯಾಗಿರುವ ವಿಜಯ್ ಅಭಿನಯದ 'ಬಿಗಿಲ್' ಕೂಡಾ ಈತನೇ ನಿರ್ದೇಶಿಸಿದ್ದು. 'ಬಿಗಿಲ್' ಚಿತ್ರ ಬಿಡುಗಡೆಗೆ ಮುನ್ನವೇ 200 ಕೋಟಿ ರೂಪಾಯಿಯ ವ್ಯಾಪಾರ ಮಾಡಿದೆ ಎಂದು ನಿರ್ಮಾಪಕರೇ ಟ್ವೀಟ್ ಮಾಡಿದ್ದಾರೆ.

ಅಟ್ಲೀ ನಿರ್ದೇಶಿಸಲಿರುವ ಶಾರೂಕ್‌ನ ಹೊಸ ಚಿತ್ರ ಸಂಪೂರ್ಣ ಆಕ್ಷನ್ ಚಿತ್ರವಂತೆ. ಈ ಚಿತ್ರಕ್ಕೆ ನಿರ್ಮಾಪಕರು ಅಟ್ಲೀಗೆ ನೀಡುತ್ತಿರುವ ಸಂಭಾವನೆ ₹ 30 ಕೋಟಿಗಳಂತೆ! ಈ ಹಿಂದೆ 'ಚೆನ್ನೈ ಎಕ್ಸ್‌ಪ್ರೆಸ್'ನಲ್ಲಿ ಪ್ರೇಕ್ಷಕರಿಗೆ ಭರಪೂರ ಮನರಂಜನೆ ನೀಡಿದಂತೆಯೇ ಈ ಹೊಸ ಚಿತ್ರದಲ್ಲೂ ನೀಡಲು ಶಾರೂಕ್ ನಿರ್ಧರಿಸಿದ್ದಾನಂತೆ. ಈ ಹೊಸ ಚಿತ್ರದ ಬಗ್ಗೆ ಸುದ್ದಿ ಹಬ್ಬಿದ್ದರೂ ಶಾರೂಕ್ ತುಟಿ ಬಿಚ್ಚಿಲ್ಲ. ಬಹುತೇಕ ಮುಂದಿನ ತಿಂಗಳು ಆತನ ಬರ್ತ್‌ಡೇ ದಿನ ಹೊಸ ಚಿತ್ರದ ಬಗ್ಗೆ ಸವತಃ ಶಾರೂಕ್ ವಿವರ ನೀಡುವ ಸಾಧ್ಯತೆ ಇದೆಯಂತೆ.

■ ಹನಿ